ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ. ಇಡಿ/ಕೆಇಎ/ಯುಜಿಸಿಇಟಿ/2024 ದಿನಾಂಕ. 03.02.2024

## ಸಿಇಟಿ 2024ರ ಆನ್‌ಲೈನ್ ಅರ್ಜಿ ಕಂ ವೆರಿಫಿಕೇಷನ್ ಮೋಡ್ಯೂಲ್ ಕುರಿತು ಸ್ಪಷ್ಟೀಕರಣ

1. ಅರ್ಜಿಯಲ್ಲಿ ಅಭ್ಯರ್ಥಿಯು ಓದಿರುವ ಬೋರ್ಡ್‌ನ ಹೆಸರಿನಲ್ಲಿ ವ್ಯತ್ಯಾಸವಿದ್ದರೆ, ಆತಂಕ ಪಡಬೇಕಾಗಿಲ್ಲ. ಶಾಲೆಯ ಹೆಸರು ಮತ್ತು ಅಭ್ಯಾಸ ಮಾಡಿರುವ ವರ್ಷಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುವುದು.

   **ಉದಾಹರಣೆಗೆ:** ಸ್ಯಾಟ್ಸ್ ಡಾಟಾಬೇಸ್‌ನಲ್ಲಿ ಸ್ಟೇಟ್ ಬೋರ್ಡ್ / ಸಿಐಎಸ್‌ಇ ಬದಲು ಸಿಬಿಎಸ್‌ಇ ತೋರಿಸಿದ್ದಲ್ಲಿ, ಸದರಿ ಮಾಹಿತಿಯು ಪರಿಶೀಲನೇ ಪ್ರಕ್ರಿಯೆಯನ್ನು ಬಾಧಿಸುವುದಿಲ್ಲ. ಶಾಲೆಯ ಹೆಸರು ಮತ್ತು ಅಭ್ಯಾಸ ಮಾಡಿರುವ ವರ್ಷಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುವುದು.

2. ಸ್ಯಾಟ್ಸ್ ಡಾಟಾಬೇಸ್‌ನಲ್ಲಿ ಯಾವುದಾದರು ಒಂದು ವರ್ಷ ತಪ್ಪಾಗಿದ್ದಲ್ಲಿ:

   **ಉದಾಹರಣೆಗೆ:** ಅಭ್ಯರ್ಥಿಯು ಓದಿರುವ ಎರಡನೇ ತರಗತಿಯ ಬದಲು ನಾಲ್ಕನೇ ತರಗತಿಯೆಂದು ತೋರಿಸಿದ್ದಲ್ಲಿ ಅಥವಾ ಅಭ್ಯರ್ಥಿಯು ಅಭ್ಯಾಸ ಮಾಡಿರುವ ಯಾವುದಾದರು ಒಂದು ವರ್ಷ ದತ್ತಾಂಶದಲ್ಲಿ ಬಿಟ್ಟುಹೋಗಿದ್ದು, ತೋರಿಸದಿದ್ದರೆ, ಅಂತಹ ಅಭ್ಯರ್ಥಿಗಳು ಈ ಕೆಳಗೆ ನಮೂದಿಸಿರುವ ಅಂಶಗಳ ಪ್ರಕಾರ ನಿರ್ಧರಿಸಬಹುದು:

   ಅ) ಗ್ರಾಮೀಣ, ಕನ್ನಡ ಮಾಧ್ಯಮ ಮೀಸಲಾತಿ ಹಾಗೂ ಭಾಷಾ / ಧಾರ್ಮಿಕ ಮೀಸಲಾತಿ ಕೋಟಾ ಕ್ಲೇಮ್ ಮಾಡದಿರುವ ಅಭ್ಯರ್ಥಿಗಳು ಅವರು ಕರ್ನಾಟಕದಲ್ಲಿ ಅಭ್ಯಾಸ ಮಾಡಿರುವ ಏಳು ವರ್ಷ ಒಂದು ಬೋರ್ಡ್ ಪರೀಕ್ಷೆಯನ್ನು ಒಳಗೊಂಡಂತೆ ( 06 ವರ್ಷ ಶಾಲಾ ಅಭ್ಯಾಸ ಮತ್ತು 10ನೇ /ಎಸ್‌ಎಸ್‌ಎಲ್‌ಸಿ ಅಥವಾ ದ್ವಿತೀಯ ಪಿಯು/12ನೇ ತರಗತಿ) ಇರುವ ಮಾಹಿತಿ ಪರಿಗಣಿಸಲಾಗುವುದು. ಅಭ್ಯರ್ಥಿಯು ಅರ್ಜಿಯಲ್ಲಿ ತಾವು ಕರ್ನಾಟಕದಲ್ಲಿ ಅಭ್ಯಾಸ ಮಾಡಿರುವ ವರ್ಷವನ್ನು 07 ಎಂದು ನಮೂದಿಸಿ ಮುಂದುವರೆಸಬಹುದು.

--2-

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in

ಅ) ) ಗ್ರಾಮೀಣ, ಕನ್ನಡ ಮಾಧ್ಯಮ ಮೀಸಲಾತಿ ಹಾಗೂ ಭಾಷಾ / ಧಾರ್ಮಿಕ ಮೀಸಲಾತಿ ಕೋಟಾ ಕ್ಲೇಮ್ ಮಾಡುವ ಅಭ್ಯರ್ಥಿಗಳ, ಅವರು ಕರ್ನಾಟಕದಲ್ಲಿ ಅಭ್ಯಾಸ ಮಾಡಿರುವ ಮಾಹಿತಿಯನ್ನು ಸ್ಯಾಟ್ಸ್ ದತ್ತಾಂಶದಲ್ಲಿ ಅಪ್‌ಡೇಟ್ ಮಾಡಿಸತಕ್ಕದ್ದು ಅಥವಾ ಅರ್ಜಿಯನ್ನು manually ಭರ್ತಿ ಮಾಡಿ ಸಲ್ಲಿಸತಕ್ಕದ್ದು.

ಸ್ಯಾಟ್ಸ್ ದತ್ತಾಂಶದಲ್ಲಿ ತಿದ್ದುಪಡಿ ಮಾಡಲು ಈ ಕೆಳಗಿನ ಇಮೇಲ್ ಐಡಿಗೆ ಮೇಲ್ ಕಳುಹಿಸಬಹುದು

**cpisatskarnataka@gmail.com**

**or**

**karnatakasatshelp@gmail.com**

ಇ) ಶಾಲೆಯ ಹೆಸರು ಸರಿಯಾಗಿದ್ದು, ವಿಳಾಸ ತಪ್ಪಾಗಿದ್ದರೂ ಅಭ್ಯರ್ಥಿಯು ಅರ್ಜಿಯನ್ನು ಮುಂದುವರೆಸಬಹುದು ಕಾರಣ ತಪ್ಪಾದ ಶಾಲೆಯ ವಿಳಾಸವು ದಾಖಲಾತಿ ಪರಿಶೀಲನೆಗೆ ಅಡ್ಡಿಯಾಗುವುದಿಲ್ಲ ಕಾರಣ ಮೇಲೆ ತಿಳಿಸಿರುವಂತೆ ಶಾಲೆಯ ಹೆಸರು ಮತ್ತು ಅಭ್ಯಾಸ ಮಾಡಿರುವ ವರ್ಷಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುವುದು.

ಈ) ಎರಡು ಸ್ಯಾಟ್ಸ್ ಸಂಖ್ಯೆ ಇರುವ ಅಭ್ಯರ್ಥಿಗಳು, ನೊಂದಣಿ ಮಾಡುವಾಗ ಒಂದು ಸ್ಯಾಟ್ಸ್ ಸಂಖ್ಯೆಯನ್ನು ಬಳಸಿ ನಮೂದಿಸುವುದು, ನಂತರ ಅರ್ಜಿಯಲ್ಲಿ ತರಗತಿಯ ಮಾಹಿತಿಯನ್ನು ನಮೂದು ಮಾಡುವಾಗ ಉಳಿದ ಎಲ್ಲಾ ಸ್ಯಾಟ್ಸ್ ಸಂಖ್ಯೆಗಳನ್ನು ನಮೂದಿಸಬಹುದು.

ಉ) ಸ್ಯಾಟ್ಸ್ ಸಂಖ್ಯೆ ಇಲ್ಲದಿರುವ ಅಭ್ಯರ್ಥಿಗಳಿಗೆ ದಿನಾಂಕ. 10.02.2024ರಿಂದ ಅರ್ಜಿಯನ್ನು ಭರ್ತಿ ಮಾಡಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುವುದು.

- 3 -

ಊ) ಅರ್ಜಿಯನ್ನು ಸಲ್ಲಿಸುವಾಗ ಅಗತ್ಯವಿರುವ ದಾಖಲಾತಿಗಳನ್ನು ಅಪ್‌ಲೋಡ್ ಮಾಡದಿರುವ ಅಭ್ಯರ್ಥಿಗಳಿಗೆ ದಿನಾಂಕ 10.02.2024 ರಿಂದ ಅಪ್‌ಲೋಡ್ ಮಾಡಲು ಅವಕಾಶ ಕಲಿಸಲಾಗುವುದು.

3. ಇತರೆ ಹಿಂದುಳಿದ ವರ್ಗದ (2ಎ, 2ಬಿ, 3ಎ, 3ಬಿ) ಜಾತಿ ಮತ್ತು ಆದಾಯವನ್ನು ಒಂದೇ ಪ್ರಮಾಣ ಪತ್ರದಲ್ಲಿ ಕಂದಾಯ ಇಲಾಖೆಯಿಂದ ನೀಡಲಾಗಿರುತ್ತಿರುವ ಕಾರಣ ಸದರಿ ಮೀಸಲಾತಿ ಕೋರಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಒಂದು ಬಾರಿ ತಮ್ಮ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಅಪ್‌ಲೋಡ್ ಮಾಡುವುದು. ಆದಾಯ ಮಿತಿಗೆ ಮತ್ತೊಮ್ಮೆ ಸರ್ಟಿಫಿಕೇಟ್‌ನ್ನು ಅಪ್‌ಲೋಡ್ ಮಾಡುವ ಅವಶ್ಯಕತೆ ಇರುವುದಿಲ್ಲ.

4. ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿರುವ ಅಭ್ಯರ್ಥಿಗಳ ಹೆಸರು ಆರ್‌ಡಿ ಸರ್ಟಿಫಿಕೇಟ್‌ನಲ್ಲಿ ಸರಿಯಾಗಿದ್ದು, ಯುಜಿಸಿಇಟಿ 2024ರ ಅರ್ಜಿ ತುಂಬುವಾಗ ಹೆಸರು ಹೊಂದಾಣಿಕೆಯಾಗದಿದ್ದರೆ ಅಂತಹ ಅಭ್ಯರ್ಥಿಗಲು ಕೆಇಎ ಪೋರ್ಟಲ್‌ನಲ್ಲಿರುವ ಗ್ರೀವನ್ಸ್ ಮ್ಯಾನೇಜ್‌ಮೆಂಟ್ ಪೋರ್ಟಲ್‌ನಲ್ಲಿ ತಮ್ಮ ಮಾಹಿತಿಯನ್ನು ಸಲ್ಲಿಸುವುದು. ಕೆಇಎ ಸಹಾಯವಾಣಿ ಇಂತಹ ಗ್ರೀವನ್ಸ್‌ಗಳನ್ನು ಸರಿಪಡಿಸಲು ಕ್ರಮವಹಿಸಲಾಗುವುದು.

5. ಅಭ್ಯರ್ಥಿಗಳಿಗೆ ಅರ್ಜಿಯಲ್ಲಿ ನಮೂದಿಸಿರುವ ಮಾಹಿತಿಯನ್ನು ತಿದ್ದುಪಡಿ ಮಾಡಲು ಇಚ್ಛಿಸಿದ್ದಲ್ಲಿ, ದಿನಾಂಕ. 10.02.2024ರಿಂದ ತಿದ್ದುಪಡಿ ಮಾಡಲು ಅವಕಾಶ ನೀಡಲಾಗುವುದು.

6. ಬ್ರೌಸರ್‌ನಲ್ಲಿ ಒಂದಕ್ಕಿಂತ ಹೆಚ್ಚಿನ ಅರ್ಜಿಯನ್ನು ಏಕಕಾಲದಲ್ಲಿ ಭರ್ತಿ ಮಾಡಲು ಯತ್ನಿಸಿದ್ದರೆ, ಮೊದಲು ತೆರೆದಿದ್ದ ಅರ್ಜಿಯ ಮಾಹಿತಿ ಎರಡನೇ ಅರ್ಜಿಯಲ್ಲಿ ತನ್ನಾನೆ ತೆಗೆದುಕೊಳ್ಳುತ್ತದೆ. ಆದ್ದರಿಂದ ಬ್ರೌಸಿಂಗ್ ಸೆಂಟರ್‌ನಿಂದ ಅರ್ಜಿಯನ್ನು ಭರ್ತಿ ಮಾಡಿಸುವ ಅಭ್ಯರ್ಥಿಗಳು, ಬ್ರೌಸಿಂಗ್ ಸೆಂಟರ್‌ನ ಸಿಬ್ಬಂದಿಯವರಿಗೆ ಸದರಿ ಮಾಹಿತಿಯನ್ನು ತಿಳಿಸುವುದು.

- - 4 -

7. ತಪ್ಪಾಗಿ ಸ್ಯಾಟ್ಸ್ ಸಂಖ್ಯೆಯನ್ನು ನಮೂದು ಮಾಡಿರುವ ಅಥವಾ ಬೇರೆ ಅಭ್ಯರ್ಥಿಗಳು ತಮ್ಮ ಸ್ಯಾಟ್ಸ್ ಸಂಖ್ಯೆಯನ್ನು ನಮೂದು ಮಾಡಿರುವ ಕಾರಣ, ತಮಗೆ ಅರ್ಜಿಯನ್ನು ತುಂಬಲು ನಿಷೇಧಿಸುವ ಹಿನ್ನಲೆಯಲ್ಲಿ, ಇಂತಹ ಅಭ್ಯರ್ಥಿಗಳು ತಮ್ಮ ಗ್ರೀವನ್ಸ್ ಅನ್ನು ಗ್ರೀವನ್ಸ್ ಮ್ಯಾನೇಜ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ್ದಲ್ಲಿ, ಅದನ್ನು ಸರಿಪಡಿಸಲು ಕ್ರಮವಹಿಸಲಾಗುವುದು.

ಸಹಿ/-

ಕಾರ್ಯನಿರ್ವಾಹಕ ನಿರ್ದೇಶಕರು, ಕೆಇಎ